**ವ್ಯವಹಾರಿಕ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂಡಾಧಿಕಾರಿಯವರ ನ್ಯಾಯಾಲಯ,**
**ಸುಳ್ಯ, ದ.ಕ. ಇವರ ನ್ಯಾಯಾಲಯದಲ್ಲಿ –**

**ಸಿ.ಸಿ.ನಂ. 41/2022**
**ಸಿ.ಡಬ್ಲ್ಯೂ.–3**
**ಪಿ.ಡಬ್ಲೂ –3**

ಸಾಕ್ಷಿದಾರರ ಹೆಸರು : ಹರೀಶ ಪಿ.
ತಂದೆಯ ಹೆಸರು : ರಾಮಣ್ಣ ಗೌಡ
ವಯಸ್ಸು : 49 ವರ್ಷ
ಉದ್ಯೋಗ : ಕೃಷಿ
ವಾಸ : ಪೈಕ ಮನೆ, ಕಾಣಿಯೂರು ಗ್ರಾಮ.
ದಿನಾಂಕ : 16–07–2026.

**ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

## ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ

ನನಗೆ ಚಾ.ಸಾ.1 ಹಾಗೂ ಚಾ.ಸಾ.2 ರವರ ಪರಿಚಯ ಇರುತ್ತದೆ. ಆರೋಪಿ ನನಗೆ ಪರಿಚಯ ಇರುತ್ತಾರೆ.

ದಿನಾಂಕ 14–09–2021 ರಂದು ರಾತ್ರಿ ಸುಮಾರು 8.45 ಗಂಟೆಗೆ ಚಾ.ಸಾ.2 ರವರ ನಿಂತಿಕಲ್ಲು ಅಂಗಡಿಯಿಂದ ಮನೆಗೆ ಸಾಮಾಗ್ರಿಗಳನ್ನು ಖರೀದಿಸಲು ಹೋಗಿದ್ದಾಗ, ಚಾ.ಸಾ.2 ರವರಿಗೆ ಸೊಂಟದಲ್ಲಿ ನೋವಿದ್ದ ಕಾರಣ ಆರೋಪಿಯ ಬಳಿ ಗ್ಯಾಸ್ ಸಿಲಿಂಡರನ್ನು ಒಳಗೆ ಇಡಲು ತಿಳಿಸಿರುತ್ತಾರೆ. ಆರೋಪಿಯ ಜೊತೆ ಚಾ.ಸಾ.1 ರವರು ಹೋಗಿರುತ್ತಾರೆ. ಹೋದ 2–3 ನಿಮಿಷದ ನಂತರ ಗೋಡಾನ್‌ನಿಂದ ಜೋರಾದ ಬೊಬ್ಬೆಯ ಶಬ್ದ ಕೇಳಿರುತ್ತದೆ. ಆಗ ಗೋಡಾನ್‌ಗೆ ನಾನು ಹಾಗೂ ಚಾ.ಸಾ.2 ರವರು ಹೋಗಿರುತ್ತೇವೆ. ಆ ಸಮಯದಲ್ಲಿ ಆರೋಪಿಯು ಅಲ್ಲಿಂದ ಓಡಿ ಹೋಗಿರುತ್ತಾರೆ.

ನಂತರ ನಾವು ಚಾ.ಸಾ.1 ರವರ ಬಳಿ ಏನಾಯಿತು ಎಂದು ವಿಚಾರಿಸಿದಾಗ, ಆರೋಪಿಯು ಚಾ.ಸಾ.1 ರವರ ಕೈಯನ್ನು ಹಿಡಿದೆಳೆದು, ಎದೆಯ ಭಾಗವನ್ನು

ಮುಟ್ಟಿ ಚಾ.ಸಾ.1 ರವರನ್ನು ತಬ್ಬಿಕೊಂಡು ಮಾನಭಂಗ ಮಾಡಿರುವುದಾಗಿ ತಿಳಿಸಿರುತ್ತಾರೆ. ಸದರಿ ಘಟನೆಯನ್ನು ಬೇರೆಯವರಿಗೆ ಹೇಳಿದರೆ ಜೀವಂತ ಇಡುವುದಿಲ್ಲವೆಂದು ಆರೋಪಿಯು ಚಾ.ಸಾ.1 ರವರಿಗೆ ಬೆದರಿಕೆ ಒಡ್ಡಿರುತ್ತಾರೆಂದು ಚಾ.ಸಾ.1 ರವರು ನಮ್ಮಲ್ಲಿ ತಿಳಿಸಿರುತ್ತಾರೆ.

ಆ ಸಮಯದಲ್ಲಿ ಮಳೆ ಬರುತ್ತಿದ್ದ ಕಾರಣ ಪೊಲೀಸರಿಗೆ ಕರೆ ಮಾಡಿದರೂ, ಕರೆ ಸಿಗುತ್ತಿರಲಿಲ್ಲ. ನಂತರ ಘಟನೆ ನಡೆದ ಮರುದಿವಸ ಅವರುಗಳು ಬೆಳ್ಳಾರೆ ಪೊಲೀಸ್ ಠಾಣೆಗೆ ಹೋಗಿ ದೂರನ್ನು ನೀಡಿದ ಬಗ್ಗೆ ನಾನು ತಿಳಿದುಕೊಂಡಿರುತ್ತೇನೆ. ಈ ಘಟನೆಯ ಬಗ್ಗೆ ಪೊಲೀಸರು ನನ್ನನ್ನು ವಿಚಾರಿಸಿ ನನ್ನ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ.

ಆರೋಪಿಯನ್ನು ನೋಡಿದರೆ ಗುರುತಿಸುತ್ತೇನೆ. ಆರೋಪಿಯು ಈ ದಿನ ಗೈರು ಹಾಜರಾಗಿದ್ದು, ಅವರನ್ನು ಗುರುತಿಸುವಲ್ಲಿ ಆರೋಪಿ ಪರ ವಕೀಲರು ಯಾವುದೇ ತಗಾದೆಯನ್ನು ಎತ್ತಿರುವುದಿಲ್ಲ.

## ಪಾಟೀ ಸವಾಲುಃ ಆರೋಪಿ ಪರ ಶ್ರೀ ಹೆಚ್.ಪಿ. ವಕೀಲರಿಂದಃ

**ವಕೀಲರು ಸಾಕ್ಷಿಯ ಪಾಟೀ ಸವಾಲಿಗೆ ಸಮಯ ಕೋರಿದ್ದು ಅದರಂತೆ ಕಾಲಾವಕಾಶ ನೀಡಲಾಯಿತು.**

ನನ್ನ ಉಕ್ತಲೇಖನದ ರೀತ್ಯಾ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.
ಓ.ಹೇ.ಕೇ.ಸರಿ ಇದೆ ಎಂದು ಒಪ್ಪಿರುತ್ತಾರೆ.

ಸಾಕ್ಷಿಯ ಸಹಿ

ವ್ಯವಹಾರಿಕ ನ್ಯಾಯಾಧೀಶರು ಮತ್ತು
ಪ್ರ.ದ.ನ್ಯಾಯಿಕ ದಂಡಾಧಿಕಾರಿಯವರು, ಸುಳ್ಯ, ದ.ಕ.

ಸಾಕ್ಷಿಯ ಸಹಿ ನ್ಯಾಯಾಧೀಶರ ಸಹಿ